RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ೫೮ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಕೇದಾರ್ ಎ. ವಿ. ಸುಬ್ಬರಂತಯ್ಯರು [ಬಿಡಿ ಪ್ರತಿ 3 ಪೈ

12—3—1962

ಸಮಸ್ತ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಮೈಸೂರು ಮಂತ್ರಿಮಂಡಲಕ್ಕೆ ಶ್ರೀಗಳಾದ ಕಪ್ಪಪ್ಪ ಮತ್ತು ಜತ್ತಿ

ನಾರ್ಚ್ 14 ರಂದು ಮೈಸೂರು ಮಂತ್ರಿಮಂಡಲದ ಸದಸ್ಯರು ಪ್ರಮಾಣ ವಚನ ಸ್ವೀಕರಿಸುವರು ಚುನಾವಣೆಯಲ್ಲಿ ವಿಜಯಗಳಿಸಿದ ಮೂವರು ಮಂತಿಗಳನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ನಿರೀಕ್ಷೆ ಇದೆ. ಮಂತ್ರಿಮಂಡಲಿಗೆ ಸೇರುವವರಲ್ಲಿ ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ಮಾಜಿ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರಿಗೆ ಆಹ್ವಾನಿಸಬಹುದು ಮೈಸೂರು ಮಂತ್ರಿಮಂಡಲಕ್ಕೆ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಬಹುಮಂತೆ ಮೈಸೂರು ಕಾಂಗ್ರೆಸಿಗರು ಒತ್ತಾಯ ಮಾಡುತ್ತಿದ್ದಾರೆ. ಈ ವಿಚಾರವನ್ನು ಕೃಷ್ಣಪ್ಪನವರು ಕಾಂಗ್ರೆಸ್ ಹೈ ಕಮಾಂಡಿನ ನಿರ್ಧಾರಕ್ಕೆ ಬಿಟ್ಟಿದ್ದಾರೆ. ನಿನ್ನೆ ಕಂಠಿಯವರು ಶ್ರೀ ಲಾಲಬಹದ್ದೂರ ಶಾಸ್ತ್ರಿಯವರನ್ನು ಎರಡು ಬಾರಿ ನೋಡಿದ್ದರು, ನೆಹರುರವರನ್ನು ಒಂದು ಬಾರಿ ನೋಡಿದ್ದರು. ಈ ದಿನ ಬೆಂಗಳೂರಿಗೆ ಆಗಮಿಸಿ ಮಂತ್ರಿಪಟ್ಟಿಯನ್ನು ತಮ್ಮ ಸಹೋದ್ಯೋಗಿಗಳೊಡನೆ ಪರಿಶೀಲಿಸಿ ಅಂತ್ಯಗೊಳಿಸುವರು

ಉಚ್ಚೆ ಅಧಿಕಾರ

ರಂಗೂನ್— ಬರ್ಮಾ ಕ್ರಾಂತಿಕಾರಿ ಸಮಿತಿಯವರು ಅಧ್ಯಕ್ಷ ಜನರಲ್ ನೆ ವಿನ್‌ಗೆ ಅಡಳಿತ, ಶಾಸನ ನ್ಯಾಯಾಂಗದ ಉಚ್ಚ ಅಧಿಕಾರ ವಹಿಸಿದರು.

ಪಿಎಸ್ಪಿಯೊಡನೆ ವಿಲೀನ

ತ್ರಿಚೂರಿನ ವಾರ್ತೆಯೊಂದು, ಕೇರಳದ ದಂಗೆಗೋರ ಪಿಎಸ್ಪಿ ಗುಂಪಿನವರು ಕಾಂಗ್ರೆಸ್ಸು ಸೇರಲು ನಿರ್ಧರಿಸಿದ್ದಾರೆ.

ಪ್ರವಾಸ ಮುಂದಕ್ಕೆ

ವಿಲಯಾದ ಪ್ರಧಾನಿ ಟೀಕಾ ಅಬ್ದುಲ್ ರಂಹರ್ವಾರು ಏಪ್ರಿಲಿನಲ್ಲಿ ಭಾರತಕ್ಕೆ ಆಗಮಿಸಬೇಕಾದುದು ಜಲೈನಲ್ಲಿ ನುಂದವರಿದಿದೆ

ಉಪಾಧ್ಯಾಯರ ಬೇಡಿಕೆ

ಸಿರವಾಗಲು ಸರ್ಕಾರಿನ ಶಾಲಾ ಉಪಾಧ್ಯಾಯರ ಸಂಘದ ಸಭೆಯಲ್ಲಿ, ಈಗ ಉಪಾಧ್ಯಾಯರಿಗೆ ಕೊಡುತ್ತಿರುವ 50 ನಯೆ ಪೈಸೆ ಸಾದಲ್ವಾನ್ನ 1 ರೂಪಾಯಿಗೆ ಹೆಚ್ಚಿಸಬೇಕೆಂದು ಕೋರುವ ನಿರ್ಣಯವಾಯಿತು

೦೦

ಭಾರಿ ಬಂಗಾಲ ಇನ್ನು ಭಾರತದಲ್ಲಿ ಬರುವದೇ ಇಲ್ಲ ಎಂದು ಅಮೆರಿಕದ ಶಾಂತಿಗೆ ಆಹಾರ ಕಾರ್ಯಕ್ರಮದ ಡೈರೆಕ್ಟರಂತಿದ ಜಾರ್ಜ್ ಮೆಕ್‌ಗವರ್ನ್ ಲಂಡನ್ನಿನಲ್ಲಿ ತಿಳಿಸಿದ್ದಾರೆ

೦೦

ಬೆಳಗಾವಿ ಜಿಲ್ಲೆಯಿಂದ ಕಾಲರಾ ವ್ಯಾಧಿಯ ಕಾರಣ 50 ಮಂದಿ ಮರಣ ಹೊಂದಿರುವರು 190 ಮಂದಿ ಕಾಲರದಿಂದ ನರಳುತ್ತಿರುವರು.

ಸಜೀವ ಸಮಾಧಿ

ಧನಬಾದ ಜಿಲ್ಲೆಯ ಕಾತ್ರಾಸಘರಿನ ಸವಿಾಪದ ಮೂಂದ ಕಲ್ಲಿದ್ದಲು ಗಣಿ ಮೇಲ್ಛಾವಣಿ ಕುಸಿದು 5 ಮಂದಿ ಸಜೀವ ಸಮಾಧಿಯಾದರು

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆ ಮೈಸೂರು

ಟೆಂಡರ್ ನೋಟೀಸ್

ಸನ್ 1962–1963 ನೇ ಸಾಲಿನಲ್ಲಿ ತಾ. 1–4–62 ರಿಂದ ತಾ 31–3–1963 ರ ವರೆಗೆ ಮೇಲ್ಕಂಡ ಇಲಾಖೆಯ ನಾಯಿಗಳ ಉಪಯೋಗಕ್ಕಾಗಿ ದಿನವಹಿ ಶುದ್ಧವಾದ ಕುರಿ ಮಾಂಸ ವಾಳೆಯು ಸಮೇತ ಮತ್ತು ವಾಳೆ ಇಲ್ಲದೇ ಇರುವುದು (with bones & without bones) ಲಿವರ್ (Liver) ಕೋಳಿ ಮೊಟ್ಟೆ (Eggs) ಮತ್ತು ನಾನ್‌ರೊಟ್ಟಿ (Bread) ಮುಂತಾದುವುಗಳನ್ನು ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು ಒಂದು ನೂರು ರೂಪಾಯಿ (Rs 100) ತೇವಣಾತಿ ಯೊಂದಿಗೆ ಮಾರ್ಚ್ ಮಾಹೆ ಹದಿನೈದನೆ ತಾರೀಖು ಅಂದರೆ 15–3–1962 ರ ಮಧ್ಯಾಹ್ನ 12-00 ಘಂಟೆಯೊಳಗಾಗಿ ಇಲಾಖಾ ಆಫೀಸರ್ ಇಚ್ ಛಾರ್ಜ್ ರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳಿಗೆ ಇಲಾಖೆಯಲ್ಲಿ ವಿಚಾರಿಸಿಕೊಳ್ಳತಕ್ಕದ್ದು.

M. S. Narayanaswamy
Officer in charge,
Palace Stables & Gajasala,
Mysore.

ಲಡಕ್ಕಿನ ಚಾವಡಿಯಲ್ಲಿ 13 ಪಕ್ಷಸ್ಥರ ಅಡಿಗಳ ಮೇಲೆ ಮತದಾನ ಕೇಂದ್ರ ನಿರ್ಮಾಣವಾಗಿದೆ.

ವಿವಿಧ ವಿಷಯಗಳು

ಇತ್ತೀಚಿಗೆ ನಡೆದ ಸಾರ್ವತಿಕ ಚುನಾವಣೆಯಲ್ಲಿ ವಿವಿಧ ಪಕ್ಷಗಳು ಪ್ರಕಟಿಸಿದ ಆಕ್ಷೇಪಾರ್ಹ ಭಿತ್ತಿ ಪತ್ರಗಳನ್ನು ಕೇಂದ್ರ ಗೃಹ ಶಾಖೆ ಸಂಗ್ರಹಮಾಡುವದಾಗಿ ನಿನ್ನೆ ನವದೆಹಲಿಯಲ್ಲಿ ಕಾಂಗ್ರೆಸ ಪಾರ್ಲಿಮೆಂಟರಿ ಸಭೆಯಲ್ಲಿ ತಿಳಿಸಿದರು. ಈ ಭಿತ್ತಿ ಪತ್ರಗಳು ಮತ್ತು ಪಾಂಪ್ಲೆಟಗಳಿಸ್ಸು ಜನರಂಭ, ಸ್ವತಂತ್ರ ಪಕ್ಷ ಪ್ರಕಟಿಸಿವೆ ಎಂದು ನೆಹರು ಸೂಚಿಸಿದರು.

ಡಮಾಸ್ಕಸ್‌ನಿಂದ ವಾರ್ತೆ ಬಂದಿದೆ. ಮೊ ರಂಜಾನಿನ ಕಡೆಯ ದಿನ ಅಲೆಪ್ಪೊ ಬಳಿ ಇದಿಬಿನಲ್ಲಿ ಗಾಳಿ ಬೆಳಕು ಇಲ್ಲದ ಸಿನಿಮಾ ನಂದಿರದಲ್ಲಿ 12 ರಿಂದ 16 ರ ವರಿಗಿನ 14 ಮಕ್ಕಳು ಸತ್ತರು. 24 ಜನರಿಗೆ ಜ್ಞಾನಹೋಗಿದ್ದು ಪ್ರಥಮ ಚಿಕಿತ್ಸೆಯನಂತರ ಗುಣವಾದರು.

ಕಾಶ್ಮೀರ ಪ್ರಶ್ನೆಯಲ್ಲಿ ಸ್ವಯಂ ನಿರ್ಣಯಾತ್ಮಕ ಹಕ್ಕಿಗೆ ತಾವು ಬೆಂಬಲಿಸುವದಾಗಿ ಪಾಕಿಸ್ತಾನ ಅಕ್ರಮಿತ ಕಾಶ್ಮೀರದ ಅಧ್ಯಕ್ಷ ಶ್ರೀ ಕುರ್ಷಿದರ್ ಕಂಠಿಯಲ್ಲಿ ತಿಳಿಸಿರುವರು.

ನಿನ್ನೆ ಮದ್ರಾಸು ಕಾರ್ಪೊರೇಷನ್ ಸ್ಟೇಡಿಯಂನಲ್ಲಿ ರಾಜಕಪ್ಪಾಂ ಟೀಂಗೂ, ಜಮಿತ್ ಗಣೇರ್ಶ ಟೀಂಗೂ ವ್ಯಾಪಾರ ನಡೆಯಿತು 25 ಸಾವಿರ ಜನ ನೋಡಿದರು

ಸರಾಯಿ ಟೆನರನಲ್ಲಿ ಒದು ಖಾಲಿ ವತದಾನ ಪೆಟ್ಟಿಗೆ ಪತ್ತೆ ಆಯಿತೆಂದು ಗಯಾ ವಾರ್ತೆ

ಪಂಜಾಬಿನ ಬ ಸ್ಥಾಪನೆ ಆಗಬೇಕೆದ ಮಾ|| ತಾರಾಸಿಂಗರು ಅಮೃತಸರದಲ್ಲಿ ತಿಳಿಸಿದರು

ಸಾಲೆಯ ಹಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಕ್ಕಯ್ಯಶಾಸ್ತ್ರಿಜೋಯಿಸರಿಂದ

13 ಅಷ್ಟಮಿ ವೈಗಶಿ

ವಿವಿಧ ವಾರ್ತೆಗಳು

★

ಮದಂತಾಸ ಡಿ ಎಂ ಕೆ ನಾಯಕಿ ಶ್ರೀ ಅಣ್ಣಾದುರೈ ರಾಜ್ಯ ಸಭೆ ಚುನಾವಣೆಗೆ ಮದರಾಸು ಶಾಸನಸಭೆಯಿಂದ ನಿಲ್ಲಬಹುದೆಂದು ಹೇಳಲಾಗಿದೆ.

೦೦೦೦

ಲಿವರ್‌ಪೂಲ್— ಇಷ್ಟವು ಶೀಘ್ರದಲ್ಲೇ ಶುಕ್ರಗ್ರಹಕ್ಕೆ ರಾಕೆಟ್ ಹಾರಿಸುವುದೆಂದು ಸರ್ ಬರ್ನಾರ್ಡ್ ಲೊವೆಲರು ಅಭಿಪ್ರಾಯ ವ್ಯಕ್ತಪಡಿಸಿದರು.

೦೦೦೦

ಮ್ಯಾಡ್ರಿಡ್— ಪ್ರಪಂಚದ ಅತ್ಯಂತ ಐಶ್ವರ್ಯವಂತರಲ್ಲಿ ಒಬ್ಬರಾದ ಜುವಾನ್ ಮಾರ್ಚ್ ತಾ || 9 ರಂದು ಸತ್ತುಹೋದರು — ಅವರ ಆಸ್ತಿ 800 ಮಿಲಿಯನ್ ಡಾಲರುಗಳೆಂದು ಅಂದಾಜು ಮಾಡಲಾಗಿದೆ.

ನೆಪೋಲಿಯನ್ ದೃಷ್ಟಿಯಲ್ಲಿ ಪತ್ರಿಕೋದ್ಯಮಿ

ಪತ್ರಿಕೋದ್ಯಮಿಯು ಗೊಣಗುಟ್ಟುವವನೂ, ಖಂಡಿಸುವವನೂ, ಬುದ್ಧಿ ಹೇಳುವವನೂ, ರಾಷ್ಟ್ರಗಳ ಶಿಕ್ಷಕನೂ ಆಗಿರುವನೆಂದು ನೆಪೋಲಿಯನ್ ಬೋನೋಪಾರ್ಟ್ ಹೇಳಿರುವನು ; ಸಾಧಿಸಬಹುದಾದ ಸನ್ನಿಗಿಂತ ನಾಲ್ಕು ವಿರೋಧ ಪತ್ರಿಕೆಗಳು ಹೆದರಬೇಕಾದ್ದಾಗಿವೆ ಎಂದೂ ಹೇಳಿರುವರು.

ನೇಪಾಳಕ್ಕೆ ಹೊರಟಿರುವ ನೇಪಾಳ

ನೇಪಾಳದ ಅರಸು ವಹೇಂದ್ರರು ಹೀಗೆ ಹೇಳಿದ್ದಾರೆ— ನೇಪಾಳ ಮತ್ತು ಟಿಬೆಟ್ಟಿನ ನಡುವೆ 50 ದಾರಿಗಳನ್ನು ವ್ಯಾಪಾರಿಗಳು ನಡಿಗೆ, ಟಾಕಣ ಅಥವ ಯಾತ್ರೆಯಿಂದ ಉಪಯೋಗಿಸುತ್ತಿದ್ದಾರೆ ; ವಾಹನಗಳು ಹೋಗಲು ಅನುಕೂಲವಿರುವಂತೆ ಒಂದು ದಾರಿಯನ್ನು ಅಗಲಮಾಡಬೇಕಾಗಿದೆ — ನಾವು ಕಮ್ಯುನಿಸ್ಟರಾಗುತ್ತಿರುವೆವೆಂದು ಜನರು ಹೇಳುವುದು ಅಶ್ಚರ್ಯವಾಗಿದೆ — ನಮ್ಮದು ರಾಜಕೀಯ ದೇವಾಲಯದಲ್ಲಿ ತಾಂಬಿಕೆಯುಳ್ಳವರಾಗಿದ್ದೇವೆ : ಚೀನಾ ಕಮ್ಯುನಿಸ್ಟರ ಮೂಲ ಸರೋಧಿ — ಚೀನವು ಉತ್ತರ-ದಕ್ಷಿಣ ರಸ್ತೆ ನಿರ್ಮಿಸುವುದಾಗಿ ತಿಳಿಸಿತ — ಯಾಕೆ ಒಪ್ಪಕೊಡದೆಂಬುದಕ್ಕೆ ನಮಗೆ ಕಾರಣ ತಿಳಿಯಲಿಲ್ಲ — ತೊಕ್ಕೆ ಇಲ್ಲದ ಯಾವ ಸಹಾಯವನ್ನೂ ನಮ್ಮ ಮಿತ್ರ ದೇಶಗಳಿಂದ ನಾವು ಹೊಂದಲು ಸಮ್ಮತಿಸುತ್ತೇವೆ — ನೇಪಾಳವು ನೆಲೆಯೂರಿಸುತ್ತಿದೆ, ಕುಂಬಾ ಪಡೆಯುತ್ತಿದೆ — ಅವೇಕಾ 8720000 ಡಾಲರು ಕೊಡುವುದು ; ಕಮ್ಯೂನಿಸ್ಟರೂ ಭಾರತೀಯ ಮಿತ್ರಗಳು ಭಾರತ, ರಷ್ಯಾ, ಚೀನಾ ಕೊಡುವವು ; ಬ್ರಿಟನ್ನು, ಪಶ್ಚಿಮ ಜರ್ಮನಿ, ನ್ಯೂಜೀಲ್ಯಾಂಡು, ವಿಶ್ವಸಂಸ್ಥೆ ಪ್ರಪಂಚ ಆರೋಗ್ಯ ಸಂಸ್ಥೆ, ಫೋರ್ಡ್ ಫೌಂಡೇಷನ್ : ಇವುಗಳ ನೆರವೂ ದೊರೆಯುವುದು

ಮಕ್ಕಳ ಆಟಿಕೆಯ ಸಾಮಾನುಗಳು

ಕೊಲೋನ್ (ಜರ್ಮನಿ)— ಇಲ್ಲಿ ನಡೆದ ಒಂದು ವಸ್ತುಪ್ರದರ್ಶನದಲ್ಲಿ ಯೂರೋಪು ಖಂಡದ ಹತ್ತು ದೇಶಗಳಲ್ಲಿನ 305 ತಯಾರಿಕಾ ಸಂಸ್ಥೆಗಳು ಅತ್ಯಂತ ನೂತನ ಮಾದರಿಯಲ್ಲಿ ತಯಾರಿಸಿದ ಮಕ್ಕಳ ಆಟಿಕೆಯ ಸಾಮಾನುಗಳನ್ನು ಪ್ರದರ್ಶಿಸಲಾಯಿತು ; ಚಿತ್ತಾಕರ್ಷಕ ರೀತಿಯಲ್ಲಿ ಮಾಡಲ್ಪಟ್ಟಿರುವ ಈ ಆಟದ ವಸ್ತುಗಳನ್ನು ನೋಡಿದರೇ ಸಾಕು, ಮಕ್ಕಳ ವನಸ್ಸು ಪರವಶವಾಗಿ ಹೋಗುವುದು, ಕೇವಲ ಮಕ್ಕಳೇ ಅಲ್ಲದೆ ದೊಡ್ಡವರು ಸಹಾ ತಮ್ಮ ಔತ್ಸುಕ್ಯವನ್ನು ವ್ಯಕ್ತಪಡಿಸುವಂತಹ ವಸ್ತುಗಳೂ ಪ್ರದರ್ಶನಕ್ಕೆ ಬಂದಿದ್ದವು — ಮಕ್ಕಳ ಹತ್ತಿಸಿಗೆಗಳು, ಚಿಕ್ಕಚಿಕ್ಕ ವೇಷ ಕುರ್ಚಿಗಳು ಉಡಿಗೆ ತೊಡಿಗೆಗಳು, ಅವುಗಳನ್ನು ಕೂಡಿಸಿ ದೂಡಿಕೊಂಡು ಹೋಗುವ ಕಳ್ಳುವ ಗಾಡಿಗಳು, ಇಂಥದೇ ಮೊದಲಾದ ವಸ್ತುಗಳೆಲ್ಲ ಇಲ್ಲಿ ಪ್ರದರ್ಶಿಸಲ್ಪಟ್ಟಿದ್ದವು — ಮಕ್ಕಳನ್ನು ಸಾಗಿಸುವ ತೊಟ್ಟಿಗಳನ್ನು ಮಾಡುವುದರಲ್ಲಿಯೂ, ಮಕ್ಕಳು ನಿದ್ರಿಸುವ ತೊಟ್ಟಿಲುಗಳನ್ನು ತಯಾರಿಸುವುದರಲ್ಲಿಯೂ ಜರ್ಮನರು ಈಗ ಹೆಚ್ಚಿನ ಶ್ರಮ ವಹಿಸುತ್ತಿದ್ದಾರೆ ; ಮಕ್ಕಳನ್ನು ನೋಡಿಕೊಳ್ಳುವುದಕ್ಕೂ, ಅವುಗಳನ್ನು ನಿದ್ರೆ ಮಾಡಿಸುವುದಕ್ಕೂ ಇನ್ನು ಮುಂದೆ ದಾದಿಯರ ಅವಶ್ಯಕತೆಯೇ ಇರುವುದಿಲ್ಲ.

ವುಡ್‌ಲ್ಯಾಂಡ್ ಯಶಸ್ವಿ 5 ನೇ ವಾರ

ಈ ಮನಮೋಹಕ ಚಿತ್ರವನ್ನು ನೀವು ಇನ್ನೂ ನೋಡದಿದ್ದರೆ ಇಂದೇ ನೋಡಿ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಒಪೆರಾ— ಅಮೋಘ 3 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

SHAKTI
SUDHA

A Superb Tonic

Help The 'Gorakshana'

★

Advertise in Goraksana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

For Quality Printing ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
L. N. Press ಅಶೋಕ ಫಾರ್ಮಸಿ
Sivarampet, Mysore ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.